# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 634 (838)

02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)

03. ಉತ್ತರಿಸುವ ದಿನಾಂಕ : 13.07.2023

04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪಾಸ್‌ಪೋರ್ಟ್ ನೀಡುವ ಹಂತದಲ್ಲಿ ಪೊಲೀಸ್ ಪರಿಶೀಲನೆಗೆ ಕಳುಹಿಸಿದಾಗ ಸದರಿ ಪೊಲೀಸ್ ಠಾಣೆಯ ಸಿಬ್ಬಂದಿಗಳು ದಾಖಲೆಗಳ ಫೋಟೋ ಕಾಪಿಗಳನ್ನು ಸಹಿ ಸಮೇತ ದೃಢೀಕೃತ ಪ್ರತಿಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; | ಪಾಸ್‌ಪೋರ್ಟ್ ಪರಿಶೀಲನೆ ಹಂತದಲ್ಲಿ ಪೊಲೀಸ್ ಠಾಣೆಗಳಲ್ಲಿ ಅರ್ಜಿದಾರರಿಂದ ಯಾವುದೇ ದಾಖಲಾತಿಗಳ ಫೋಟೋ ಕಾಪಿಗಳ ಸಹಿ ಸಮೇತ ದೃಢೀಕೃತ ಪ್ರತಿಗಳನ್ನು ಪಡೆಯುತ್ತಿರುವುದಿಲ್ಲ. ಕೇಂದ್ರ ಸರ್ಕಾರದ ವತಿಯಿಂದ ಎಂ. ಪಾಸ್‌ಪೋರ್ಟ್ ಜಾರಿಯಲ್ಲಿದ್ದು, ಪಾಸ್‌ಪೋರ್ಟ್ ಪರಿಶೀಲನೆಗಾಗಿ ಮಂಜೂರಾಗಿರುವ ಟ್ಯಾಬ್‌ಗಳ ಸಮೇತ ಸಿಬ್ಬಂದಿಯವರು ಖುದ್ದಾಗಿ ಅರ್ಜಿದಾರರ ಮನೆಗೆ ಹೋಗಿ ಪರಿಶೀಲನೆ ಮಾಡಲಾಗುತ್ತಿದೆ. |
| ಆ) | ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ಸದರಿ ಠಾಣಾ ಸಿಬ್ಬಂದಿ ದೃಢೀಕೃತ ನಕಲನ್ನು ಪಡೆಯುವ ಬದಲಿಗೆ ಅಸಲು ಕಾಪಿಗಳನ್ನು ಪಡೆದು ದೃಢೀಕರಿಸಲು ಸಹಿ ಪಡೆದು, ಕಾಗದ ಆಡಳಿತದತ್ತ ಒಂದು ಹೆಜ್ಜೆ ಇಡಲು ಇರುವ ಸಮಸ್ಯೆಗಳೇನು; | ಅರ್ಜಿದಾರರ ಅರ್ಜಿ ಪರಿಶೀಲನೆ ಸಮಯದಲ್ಲಿ ಅರ್ಜಿದಾರರಿಂದ ಮೂಲ ಅಸಲು ದಾಖಲಾತಿಗಳನ್ನು ಪರಿಶೀಲಿಸಿ ಅರ್ಜಿದಾರರಿಗೆ ಹಿಂದಿರುಗಿಸುತ್ತಿದ್ದು ಯಾವುದೇ ದೃಢೀಕೃತ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆಯುತ್ತಿರುವುದಿಲ್ಲ. |
| ಇ) | ಪೋಟೋ ಕಾಪಿ ಮಾಡಿಸಲು ಹಾಗೂ ಇತರ ಸಮಸ್ಯೆಗಳನ್ನು ತಡೆಯಲು ಸರ್ಕಾರದ ಕ್ರಮಗಳೇನು? (ಸಂಪೂರ್ಣ ಮಾಹಿತಿ ನಿಡುವುದು) | ಅನ್ವಯಿಸುವುದಿಲ್ಲ. |

ಸಂಖ್ಯೆ: ಒಇ 314 ಪಿಎಂಎಸ್ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು